Regd No M 1299 34 th Year ತಾ|| 26--2--51

ಸತ್ಯವಾದಿ ಸೋಮವಾರ ಪಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯುಡು | ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ಶಿಂಗಳಗೊಂದಲವರ್ತಿ]
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಉಡ್‌ಲಾಂಡ್
ಶಿ ನಿ
26-2-51ರಿಂದ
Facinating English Picture
KANSAN
ರಿಚ್ಚರ್ಡ್ ಹಿಕ್ಸ್ — ಜೇಕ್ ವಾಟ್
ಪಾತ್ರವಹಿಸಿರುವ
ಕ ನ್ ಸ ನ್
ಸೊಗಸಾದ ಇಂಗ್ಲೀಷು ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್
ಅಮೋಘ 3 ನೇ ವಾ'
ಒಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಕರ್ದಾರ್‌ರವರ
ದಾ ನ್ತಾ ನ್
ಪಾತ್ರ: ಸುರೈಯಾ, ರಾಜಕಪೂರ್, ವೀಣ
ಪ್ರತಿ ದಿನ 3 ಪ್ರದರ್ಶನಗಳು

Announcement
Theatre building old materials and furniture are being sold very cheap.
Apply to—
NEW OPERA TALKIES
MYSORE

ಏನೆನೂ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ
ವಿವರಗಳಿಗೆ—
ನ್ಯೂ ಒಪೇರಾ ಟಾಕೀಸ್
ಮೈ ಸೂ ರು

Edited, Printed and Published by M. S. Krishna Rao. at the Satyavadi Press Chamrajpuram Mysore

ದಿವ್ಯವಾಣಿ

ವಿಶ್ವಾಸಪಾತ್ರನಾಗಿರುವಿಕೆಯೇ ಉಶ್ವಮ ಸನ್ಮಾನವು ಜ್ಞಾ. ಶ.

ಎರಡು ಬಲೂನ್‌ಗಳು

ಗ್ರೇಟರ್ ಬರ್ಲಿನ್‌ನಲ್ಲಿ ಮೂರಂಲ್ಲಿ ಎಂಡು ಭಾಗ ಪಶ್ಚಿಮ ರಾಜ್ಯಗಳ ಅಧಿಕಾರದಲ್ಲಿದೆ ; ನಿಕ್ಕ ಭಾಗ ರಷ್ಯಾದ ಅಧೀನದಲ್ಲಿದೆ : ಪಶ್ಚಿಮ ರಾಜ್ಯಗಳ ಪಾಲಿನಲ್ಲಿ 21,26,000 ಮಂದಿಯೂ ಇದ್ದಾರೆ.

ಪೂರ್ವ ಬರ್ಲಿನ್‌ನಲ್ಲಿ ನಿರುದ್ಯೋಗತೆ ಹೆಚ್ಚಿದ್ದು ವಿಶೇಷ ಪತ್ರಗಳಲ್ಲಿ ಯಾವುದನ್ನು ಮಾರಬಹುದೋ, ಯಾವುದನ್ನು ಮಾರಕೂಡದೋ ಸರ್ಕಾರವೇ ನಿರ್ಣಯಿಸುತ್ತದೆ ಮಾಂಸಾಟದ ಬೆಲೆಗಳ ಕಂಟ್ರೋಲು ಇರುತ್ತದೆ ವ್ಯಾಪಾರವು ಹೆಚ್ಚಾಗಿ ಸಹಕಾರ ಸಂಘಗಳ ಮೂಲಕ ವಾಗಿಯೂ, ಸರ್ಕಾರದವರಿಂದಲೂ ನಡೆಯುತ್ತದೆ. ಬಂಡವಾಳಗಾರರ ಹೆಧವಿಲ್ಲ ಆದರೆ ಅವರನ್ನು ಯಾರೂ ಪ್ರೋತ್ಸಾಹಮಾಡುವದಿಲ್ಲ. (ಲಂಡನ್ ಟೈಮ್ಸ್)

ಯೋಗ ಸಮಾಧಿ

ವಿಜಯವಾಡದಲ್ಲಿ ಕೃಷ್ಣಾ ನದಿಯು ದಡದಲ್ಲಿ ಶ್ರೀ ಗಾಂಧಿಯವರ ಅಸ್ಥಿಗಳನ್ನು ವಿಸರ್ಜನ ಮಾಡಿದ ಸ್ಥಳದಲ್ಲಿ ಶ್ರೀ ರಾಮಾನಂದ ಯೋಗಿಗಳವರು 8 ನೇ ತಾರೀಖು ಪ್ರಾತಃಕಾಲ 10 ಗಂಟೆಯಿಂದ 12 ನೇ ತಾರೀಖು ಪ್ರಾತಃಕಾಲ 6 ಗಂಟೆಗಳವರೆಗೂ ಭೂಗರ್ಭದಲ್ಲಿದ್ದು ಹೊರಗೆ ಬಂದರು. 4 ಅಡಿ ಆಳದ 9 ಅಡಿ ಅಳವುಳ್ಳ ಹಳ್ಳದಲ್ಲಿ ಪ್ರವೇಶಿಸಿದ ಕೂಡಲಾಯು ಮಣ್ಣಿನಿಂದ ಮೇಲೆಮುಚ್ಚಲ್ಪಟ್ಟಿತು. ಹೊರಗೆ ಬಂದಾಗ ಯಾವ ಬದಲಾವಣೆಯಿಲ್ಲದೆ ವೆತ್ಯಾಸವಿಲ್ಲದೆ ಇದ್ದರು ; ಇವರ ಯೋಗಶಕ್ತಿಯನ್ನು ಕೇಳಿ ಪ್ರಜೆಗಳು ಗುಂಪುಗುಂಪಾಗಿ ಒಂದು ಶ್ರೀ ಸ್ವಾಮಿಗಳವರ ದರ್ಶನವನ್ನು ಪಡೆದುಕೊಂಡರು.

ಕ್ಷಾಮವು ಸನ್ನಿಹಿತವಾಗುತ್ತಿದೆ

ಮೈಸೂರು : ಕೃಷ್ಣರಾಜನಗರ ತಾಲ್ಲೂಕು, ನಂಜನಗೂಡು ತಾಲ್ಲೂಕು ಮತ್ತು ನೈಸೊಡು ತಾಲ್ಲೂಕು ಹಳ್ಳಿಗಳಲ್ಲಿ ಧಾನ್ಯ ಸಂಗ್ರಹ ಪರಿಸ್ಥಿತಿಯ ಅಹವಾಲು ಶೇಖರಿಸುವ ಪತ್ರದವರು ಕೆಲಸ ಮಾಡಿದ್ದಾರೆ. ಲೂಟಿ ಮಾಡಿದ್ದಾರೆ. ಆ ಹಳ್ಳಿಗಳಲ್ಲಿ ಕ್ಷಾಮವು ಸನ್ನಿಹಿತವಾಗಿದೆ ಕೈತಾಪಿಗಳು ಸಾಗುವಳಿ ಮಾಡಲು ಸಹಾಯಧನವನ್ನು ಎಂದು ಹೇಗಾದಲ್ಲಿ ಕಮ್ಯೂನಿಸ್ಟರು ಉದ್ಭವಿಸಿದವರಂಲ್ಲಿ ಸಂದೇಹವಿಲ್ಲ — ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ನಿನ್ನೆ ಸುದ್ದಿಗಾರರ ಪರಿಷತ್ತಿನಲ್ಲಿ ತಿಳಿಸಿದರು

ಈ ಪರಿಸ್ಥಿತಿಯನ್ನು ಮುಖ್ಯ ಮಂತ್ರಿ ಶ್ರೀ ಶ್ರೀ ಕೆ. ಸಿ. ರೆಡ್ಡಿಯವರಿಗೆ ತಿಳಿಸಿದೆ. ಅದಕ್ಕೆ ಅವರೇನೂ ಮಾಡಿದಂತಾಗಲಿಲ್ಲ — ಎಂದು ಅವರು ತಿಳಿಸಿದರು.

ಆಹಾರ ಶಾಖೆಯಿಂದ ಹೊರಟಿರುವ ಸಂಖ್ಯೆ ಸತ್ಯವಾದುದಲ್ಲವೆಂದು ತಿಳಿಸಿದರು

ದುರುಪಯೋಗಿಗೆ ದಂಡ

ಹದಿನಾಲ್ಕು ಪಾಯಿಂಟ್ ಮೇಲ್ಪಟ್ಟು ಗ್ಯಾಲನ್ ಪೆಟ್ರೋಲ ದುರುಪಯೋಗ ಮಾಡಿದ ಒಕ್ಕಲಿಗ ಜೊಂಬಾಯಿ ಪೌಂಸಭೆಯ ಕಂಟ್ರಾಕ್ಟರಾದ ಶ್ರೀ ಫ್ರೇಂರೋಜ ಪೆಸ್ಟೊಂಜಿಗಾಗಂತಾಟಂಗ ಇಪ್ಪತ್ತು ಸಹಸ್ರ ರೂ ದಂಡ ವಿಧಿಸಲಾಗಿದೆ

ರೈಲು ದರ ಹೆಚ್ಚಿದ್ದಕ್ಕೆ ಖಂಡನೆ

ಸರ್ವಾನುವಾದಿ ಸಕ್ಕದ ಧುರೀಣ ಶ್ರೀ ಜಯ ಪ್ರಕಾಶ್ ನಿಕ್ಕು ಭಾರತ ವಣಿಕ ಸಂಘ ರೈಲ್ವೆ ದರ ಅಧಿಕವಾದ ಬಗ್ಗೆ ಪ್ರತಿಭಟಿಸಿದ್ದಾರೆ

ಎಂದಿಗೂ ಅಂಗೀಕರಿಸಲಾರೆ

ಷೇಂ-ಇ-ಕಾಶ್ಮೀರ್ ಷೇಕ್ ಅಬ್ದುಲ್ಲ ಕಾಶ್ಮೀರ ವಿಭಜನೆ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ

ಎ ಕಾರ್ಡಿಗೆ 10 ಔನ್ಸ್ ಬಿ ಕಾರ್ಡಿಗೆ 12 ಔನ್ಸ್ ಸೀಪ್ಷ್ ಕೊಡಬೇಕೆಂಬ ತಂತ್ರವು ವೈಸೂರು ಕಾರ್ಡ್‌ದಾರರ ಸಭೆಯಲ್ಲಿ ಅಂಗೀಕೃತವಾಗಿದೆ

ಕಾಂಗ್ರೆಸಿಗೆ ಸರ್ದಾರರ ಕಾಣಿಕೆ

ಸರ್ದಾರ್ ಪಟೇಲರು ಭಾರತ ಕಾಂಗ್ರೆಸಿಗೆ ಇದಿನೆಂಟು ಲಕ್ಷ ರೂಗಳನ್ನೂ ಗುಜರಾತ ಕಾಂಗ್ರೆಸಿಗೆ ಐದುಸಾರುಲ್ಲ ಬಿಟ್ಟರು ನದಾಗಿಯೂ ವೆಹಲಿನಿಂದ ಗೊತಾಗಿದೆ

ಜಪಾನಿಗೆ ಮಾರುಕಟ್ಟೆ

ಭಾರತದಲ್ಲಿ ಬಾರ್ ಮಾರ್ಕೆಟ್ ಜನರಿಗೆ ದೊರೆಯದಾಗಿ ಜಪಾನ್ ವಾಣಿಜ್ಯ ಶಾಖೆ ಕಾರ್ಯದರ್ಶಿ ಶ್ರೀ ಆರ್ ಶಕ್ತಾಬಿ ಬೊಂಬಾಯಿನಲ್ಲಿ ತಿಳಿಸಿದರು

ಸಂತಾಪ ಸೂಚನೆ

ಡಾ|| ಸಿ ಆರ್ ರೆಡ್ಡಿಗಳ ನಿಧನಕ್ಕಾಗಿ ಶ್ರೀಗಳಾದ ಕೆ ಸಿ ರೆಡ್ಡಿ, ದಾಸಪ್ಪನವರು ಸಂತಾಪಿಸಿದರು

ಹೆಳ್ಳು ಹೋಯ್ತು

ಕ್ಲಿಪ್ ಎಮಿಲ್ ಜೂಲಿಯಟ್ ಫ್ರೆಸ್ಸರಿಗೆ ಬ್ರಿಟನ್ನಿನಲ್ಲಿ ನಾಗರಿಕ ಹಕ್ಕು ರದ್ದಾಯಿತಿದ್ದು ಲಂಡನ್ ಮೇರ್ ಆಗಿ ವಿಜ್ಞಾನಿಯಾಗಿದ್ದ ಈತ ರಷ್ಯಕ್ಕೆ ಪಲಾಯನಮಾಡಿದನು

ನೆಹರು ಉಮೇದುವಾರಿಕೆ

ಡಾ|| ನೆಹರು ಹೆಸರು ನೊಬೆಲ್ ಪಾರಿತೋಷಕಕ್ಕೆ ಸೂಚಿಸಲಾಗಿದೆ ಎಂದು ಆಸ್ಲೋ ವರ್ತೆ

ಅಂಗೀಕಾರ

ಶ್ರೀ ಎಸ್ ಲಿಂಗಣ್ಣನವರು ವೈಸೂರು ಪೌಂಸಭೆಯಿಂದ ಗತಾಧಿವೃದ್ಧಿ ಸಭೆಗೆ ಆಯ್ಕೆಯಾಗಿರುವುದನ್ನು ಸರ್ಕಾರ ಅಂಗೀಕರಿಸಿದೆ

ಪಂಚಗ್ರಹ ಯೋಗ

16-3-51 ರಲ್ಲಿ ಕುಂಭ ರಾಶಿಯಲ್ಲಿ ಪಂಚಗ್ರಹ ಯೋಗವಿದ್ದು ಕೆಲವು ರಾಶಿಯವರಿಗೆ ಕಷ್ಟದಿಂದು ಹೇಳಲಾಗಿದೆ

ಪ್ರದರ್ಶನ

ಏಪ್ರಿಲ್ ಮಧ್ಯೆ ನವಬಿಹಲಿಯಲ್ಲಿ ಅಕ್ಕಿ ಚೀಟುಗಳ ಪ್ರದರ್ಶನ ನಡೆಯುವುದಾಗಿ ಗೊತ್ತಾಗಿದೆ

ಸಂವತ್ಸರ ೯ ಸಂಚಿಕೆ ೨೪ ॥ಶ್ರೀ॥ ತಾ॥ 26-2-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ ವ ಸ್ವ. ಸಂಘ

ಹಿಂದೂಕೋಡನು ಸಮರ್ಥಿಸುವ ಶ್ರೀ ನೆಹರೂರವರಿಗೆ ಉತ್ತರ

(ದ್ವಾರಕಾ ಪೀಠದ ಪ್ರಕಟಣೆ)

ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರಲಾಲ ನೆಹರುರವರು ಲಕ್ನೌದಲ್ಲಿ ಇತ್ತೀಚಿನ ಭಾಷಣವೊಂದರಲ್ಲಿ ಹಿಂದೂಕೋಡು ವಿರೋಧಿಗಳನ್ನು ತೀವ್ರ ಕ್ಷುಲ್ಲಕ ಪದ್ಧಗಳಿಂದ ತಿರಸ್ಕರಿಸಿರುವುದು ಅತ್ಯಂತ ಖೇದಕರವೂ ಖಂಡನೀಯವೂ ಆಗಿದೆ. ಭಾರತವು ಈಗ ಜನತಂತ್ರ ರಾಜ್ಯವಾಗಿದ್ದು ಸಮಸ್ತ ಪ್ರಜೆಗಳೂ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪೂರ್ಣ ಸ್ವಾತಂತ್ರ್ಯವಿರುವಾಗ ಹಿಂದೂ ಸಂಸ್ಕೃತಿ — ಧರ್ಮಗಳನ್ನು ನಾಶಮಾಡುವ ಉದ್ದೇಶಕ್ಕಾಗಿಯೂ ಹಾನಿಕಾರಕವೂ ಆದ ಹಿಂದೂಕೋಡು ಶಾಸನವನ್ನು ಬಲಾತ್ಕಾರವಾಗಿ ಹೇರುವುದನ್ನು ಆಪಾದ ವಿರೋಧಿಸುವುದಾಗಿ ತಪ್ಪೇನು? ಹೀಗೆ ವಿರೋಧಿಸುವುದು ಕಾನೂನಿದಲ್ಲಿ ಭಾರತದಲ್ಲಿ ವ್ಯಕ್ತಿಸ್ವಾತಂತ್ರ್ಯ ಮತ್ತು ಭಾಷಣಸ್ವಾತಂತ್ರ್ಯ ಮುಂತಾದವುಗಳು ಖಂಡಿತವಾಗಿಯೂ ಇಲ್ಲವೆಂದೇ ಹೇಳಬೇಕಾಗುವುದು ಹಿಂದೂಕೋಡು ಇನ್ನೂ ಧಾರಾಸಭೆಯಲ್ಲಿದ್ದುದರ ಮೇಲೆ ಸಂಕಾರವೇ ಪ್ರಜೆಗಳ ಅಭಿಪ್ರಾಯವನ್ನು ಕೇಳಿರುವಾಗ ಪ್ರಜೆಗಳು ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಬಾರದೆ?

ಶ್ರೀ ನೆಹರೂರವರು ಮುಖ್ಯ ನಾಯಕರಾಗಿದ್ದು ಭಾರತದ ಪ್ರಧಾನಾಮಾತ್ಯ ಪದವಿಯಂತಹ ದೊಡ್ಡ ಸ್ಥಾನದಲ್ಲಿದ್ದೂ ಈ ರೀತಿ ಪ್ರಜೆಗಳನ್ನು ನಿಂದಿಸುವುದು ಎಷ್ಟಕ್ಕೂ ಶೋಭಾಸ್ಪದವಾದುದಲ್ಲ. ಅದರಲ್ಲೂ 'ಹಿಂದೂಕೋಡು ವಿರೋಧಿಗಳು ಪ್ರತ್ಯಾಘಾತಿಗಳು .... ಬೆಲೆಯಿಲ್ಲದವರು .... ಅಯೋಗ್ಯರು .... ಬುದ್ಧಿಯಿಲ್ಲದವರು ....' ಇತ್ಯಾದಿ ಇತ್ಯಾದಿಯಾಗಿ ಅವಹೇಳನೆ ಮಾಡುವುದಂತೂ ಸರ್ವಥಾ ಸೌಜನ್ಯವಾದುದಲ್ಲ. ಹಿಂದೂಕೋಡನ್ನು ಕಳೆದ ವರ್ಷ ನವೆಂಬರಿನ ಭಾರತಾಧ್ಯಕ್ಷರಾದ ಶ್ರೀ ಬಾಬೂ ರಾಜೇಂದ್ರ ಪ್ರಸಾದರವರು ಪೂರ್ಣವಾಗಿ ವಿರೋಧಿಸಿದರು. ಅಂದಮೇಲೆ ಮೇಲ್ಕಂಡ ನಾಯಕರುಗಳು ಅವರಿಗೂ ಸೇರಿವೆ ಹೇಗೆ? ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರೂ, ಈಗಿನ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ ಟಂಡನ್‌ರವರೂ, ಫೆಡರಲ್ ಕೋರ್ಟಿನ ಜಡ್ಜರಾಗಿ ಹಿಂದಿದ್ದ ಎಸ್ ಎಸ್. ಶ್ರೀ ವಾದಾಚಾರಿಯವರೂ, ಕಲ್ಕತ್ತಾ ಹೈ ಕೋರ್ಟಿನ ೪ ಜನ ಜಡ್ಜರೂ, ಮದರಾಸು ಹೈ ಕೋರ್ಟಿನ ೨ ಜನ ಜಡ್ಜರೂ, ಬಾಂಗಾಳಾದ್ಯಂತ ೨೦ ಜನ ಜಡ್ಜರೂ ಮತ್ತು ಮಾನ್ಯರಾದ ಗವರ್ನರ್ ಶ್ರೀ ಕೈಲಾಸನಾಥ ಕಾಟ್ಜೂ ಹಾಗೂ ಗವರ್ನರ್ ಶ್ರೀ ಆಣೆಯವರೇ ಮುಂತಾದ ಮಹಾ ಮೇಧಾವಿಗಳೂ ನೇತೃಗಳೂ ಬುದ್ಧಿಹೀನರೆ? ಬೆಲೆಯಿಲ್ಲದವರೆ? ಪಾರ್ಲಿಮೆಂಟಿನಲ್ಲಿ ಹಿಂದೂಕೋಡನ್ನು ವಿರೋಧಿಸುತ್ತಿರುವ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್ ಮತ್ತು ನೂರಾರು ಸದಸ್ಯರುಗಳೂ ಪ್ರತ್ಯಾಘಾತಿಗಳೆ? ಅನಾಗರಿಕರಿಗೂ ಸ್ವಲ್ಪವೂ ಬುದ್ಧಿಯೇ ಇಲ್ಲವೆ? ಇನ್ನು ಹಿಂದೂ ಕೋಡನ್ನು ವಿರೋಧಿಸುವ ದೊಡ್ಡ ದೊಡ್ಡ ಧರ್ಮಾಚಾರ್ಯರುಗಳೂ, ವಿದ್ವಾಂಸರುಗಳೂ, ಶ್ರೀ ಸ್ವಾಮಿಜಿ ಶಂಕರಭಾರತೀ ಮಹಾಸಂಸ್ಥಾನ ಮಹಾಸಂಸ್ಥಾನದವರೂ, ಧರ್ಮಸಂಸ್ಥೆಗಳೂ ನಿಂದಾರ್ಹವಾದುವೆ? ಹೀಗೆ ಶಾಸನವನ್ನು ವಿರೋಧಿಸುವುದನ್ನು ಸಹಿಸಲಾಗದಿದ್ದಲ್ಲಿ ಪಾರ್ಲಿಮೆಂಟಿನಲ್ಲಿ ಅದನ್ನು ಶಾಸನವಾಗಿ ತಂದದ್ದೇಕೆ? ಅರ್ಡಿನೆನ್ಸಿನಿಂದ — ಸುಗ್ರೀವಾಜ್ಞೆಯಿಂದ — ಜಾರಿಗೆ ತರಬಹುದಲ್ಲಾ! ಪ್ರಪಂಚಕ್ಕೆ ಜನತಂತ್ರದ ಮತ್ತು ಶಾಂತಿಯ ಸಂದೇಶವನ್ನು ಕೊಡುತ್ತಿರುವ ಶ್ರೀ ನೆಹರೂರವರು ಈ ರೀತಿ ಸ್ವದೇಶೀಯರನ್ನು ನಿಂದೆ ಮಾಡುವುದೂ, ಅವರ ಅಭಿಪ್ರಾಯವನ್ನು ಅಲ್ಲಗಳೆಯುವುದೂ ಎಂತಹ ಶೋಚನೀಯವಿದು!

ಈಗ ಭಾರತದ ಅಂತರ — ಬಾಹ್ಯ ಪರಿಸ್ಥಿತಿಗಳೇ ಶೋಚನೀಯವಾಗಿದ್ದು ಅವನ್ನು ಸುಧಾರಿಸಬೇಕಾದುದಿರುವಾಗ ಹಿಂದೂಕೋಡಿನಂತಹ ಕ್ರಾಂತಿಕಾರೀ ಶಾಸನದ ಅನಶ್ಯಕತೆಯೇನು? ಈ ಕೋಡಿನಿಂದ ದೇಶದ ಅಶಾಂತಿಭಾವನೆ ದೂರವಾದೀತೆ? ಜೀವನಕ್ಕೆ ಅವಶ್ಯಕವಾದ ಇತರ ವಸ್ತುಗಳು ಸುಲಭವಾದಾವೆ? ಅಥವಾ ಅಂತರರಾಷ್ಟ್ರೀಯ ಸಮಸ್ಯೆಗಳು ಬಗೆಹರಿಯುವುವೆ?

ಅದುದರಿಂದ ಒಟ್ಟುಸಂಪ್ರತಿಕ ವ್ಯಕ್ತಿಗಳ ತೀವ್ರ ವಿರೋಧವಿರುವುದರಿಂದ ಹಿಂದೂಕೋಡಿನಿಂದ ಧರ್ಮ — ಸಂಸ್ಕೃತಿ — ಸಭ್ಯತೆಗಳು ನಾಶವಾಗುವುದರಿಂದಲೂ, ಧರ್ಮಾಧಿಷ್ಠಿತ ರಾಜ್ಯಕ್ಕೆ ಅಂತಹ ಕಾನೂನನ್ನು ಮಾಡಲು ಅಧಿಕಾರವಿಲ್ಲದಿರುವುದರಿಂದಲೂ, ಹಿಂದೂಕೋಡು ಸಮರ್ಥಕರಾದ ಶ್ರೀ ನೆಹರೂರವರೂ ಅವರ ಸಹಕಾರಿಗಳೂ ಈ ಅನಾವಶ್ಯಕವಾದ ಕೋಡಿಗಾಗಿ ಅಗ್ನಿಹೋತ್ರಾದಿ ತಮ್ಮ ಜನಪ್ರಿಯತೆಯನ್ನು ಕಳೆದುಕೊಳ್ಳದೆ ಸರ್ವಾದರಣೀಯವಾಗಿ ರಾಜ್ಯಭಾರ ನಡೆಸಿ ಸಮಸ್ತ ಪ್ರಜೆಗಳಿಗೂ ಸಂತೋಷವನ್ನುಂಟುಮಾಡಲಿ— 'ಸಂತೋಷಂ ಖಲು ಈಯತೇ' ಎಂಬ್ರಾಹ್ಮಣಃ ಪರಮೇಶ್ವರಪೂಜನವತ್'.

ಧರ್ಮಾಭಿಮಾನಿಗಳಾದ ಸಜ್ಜನರು ಶ್ರೀ ನೆಹರೂರವರ ಇಂತಹ ನಿಂದೆ, ಬೆದರಿಕೆಗಳಿಂದ ಧೈರ್ಯಗೆಡದೆ ಧರ್ಮವಿಧ್ವಂಸಕವಾದ ಇಂತಹ ಕೋಡನ್ನು ಇನ್ನೂ ಹೆಚ್ಚಾಗಿ ವಿರೋಧಿಸಿ ಇದು ಸ್ವಶಾಸನವಾಗದಂತೆ ಶಾಂತಿಯುಕ್ತವಾದ ಮೈಥಿ ಉಪಾಯಗಳಿಂದ ಪ್ರಯತ್ನಿಸಬೇಕು.

ಹಿಂದೂಕೋಡ ಸರ್ವವಿಧದಿಂದಲೂ ಅನಾವಶ್ಯಕವಾದುದೆಂದು ಸಿದ್ಧವಾಗಿರುವುದರಿಂದ ಅದಂಗವಾಗಿ ಮಾಡಲೋಪಗಳ ಚರ್ಚೆ ಪಿಷ್ಟಪೇಷಣವಾಗುತ್ತದಾದ್ದರಿಂದ ಪುನಃ ಪರಿಶೀಲಿಸುವುದು ಅನಾವಶ್ಯಕ. ಭಗವಂತನು ಸರ್ವರಿಗೂ ಸದ್ಬುದ್ಧಿಯನ್ನು ಪ್ರಸಾದಿಸಲಿ! ಧರ್ಮವನ್ನು ರಕ್ಷಿಸಲಿ!

ಪಂಚಭೂತಗಳ ಸೃಷ್ಟಿಯೂ ಈಶ್ವರನೂ

(ಶಂಕರಾಶ್ರಮ ಸ್ವಾಮಿಗಳು)

(ಮುಂದುವರಿದುದು)

ಈ ರೀತಿಯಾಗಿ ಸೂಕ್ಷ್ಮವೂ, ವ್ಯಾಪಕವೂ, ಸ್ವಚ್ಛವೂ ಆದುದನ್ನು ಕಾರಣವೆಂದೂ, ಆಧಾರವೆಂದೂ ಒಪ್ಪುವುದರಿಂದ ಎಲ್ಲಕ್ಕೂ ವ್ಯಾಪಕವೂ, ಎಲ್ಲಕ್ಕಿಂತ ಸೂಕ್ಷ್ಮವೂ, ಸ್ವಚ್ಛವೂ ಆದ ಸ್ವಪ್ರಕಾಶವಾದ ಸತ್, ಪರಮಾರ್ಥ ತತ್ವವು ಸಿದ್ಧವಾಗುತ್ತದೆ

ವೈದೀಕರು ಎಷ್ಟು ಪೃಥಿವೀ ಮತ್ತು ಜಗತ್ತನ್ನು ನಿರ್ಣಯಿಸಿದ್ದರೋ ಅದಕ್ಕಿಂತಲೂ ಎಷ್ಟೋ ಹೆಚ್ಚು ಲೋಕಗಳನ್ನು ವೈಜ್ಞಾನಿಕರು ಕಂಡುಹಿಡಿದಿದ್ದಾರೆಂದು ಅನ್ನಿಸಲಾಗುತ್ತಿದೆ ರಾತ್ರಿಯಲ್ಲಿ ಹೊಳೆಯುವ ಅಪರಿಗಣಿತ ತಾರೆಗಳಿಂದ ಸಭೆಗೊಂಡುಬಲವು ಬೆಳಗುತ್ತದೆಯೋ ಅವೆಲ್ಲಾ ಲೋಕಗಳೇ. ಆದರೆ ಉಪನಿಷತ್ತು ಪುರಾಣಗಳ ಅಭಿಪ್ರಾಯ ತಳಯದೇ ಇರುವುದರಿಂದ ಈ ಭ್ರಮೆಯುಂಟಾಗಿದೆ. ಉಪನಿಷತ್ತಿನ ಪೃಥಿವಿ, ಜಲ ಮುಂತಾಡುವುಗಳ. ಎಷ್ಟು ವ್ಯಾಪಕವೆಂದರೆ— ಅವುಗಳಲ್ಲಿ ಎಲ್ಲವೂ ಅಂತರ್ಭವಿಸುತ್ತದೆ ಗಂಧ ಗುಣವುಳ್ಳ ದ್ರವ್ಯವು ಪೃಥಿವಿಯಾಗಿಯೂ, ರಸಗುಣವುಳ್ಳ ದ್ರವ್ಯವು ಜಲವಾಗಿಯೂ ಇದೆ. ಎಷ್ಟೆಷ್ಟು ಗೋಳಗಳಿವೆಯೋ ಎಲ್ಲವೂ ಗಂಧಗುಣವುಳ್ಳ ಪೃಥಿವಿಯ ಸಮ್ಮಿಶ್ರಣದಿಂದಿವೆ. ಈ ರೀತಿಯಾಗಿ ಪೃಥಿವಿಯಲ್ಲಿ ಎಲ್ಲವೂ ಸೇರುತ್ತದೆ; ಹೀಗೆಯೇ ಪೃಥಿವಿಗಿಂತ ನೂರಾರುಪಟ್ಟು ಅಧಿಕವಾದ ರಸಗುಣವುಳ್ಳ ಜಲವಿದೆ. [ಸಶೇಷ

ಕೋತಿಗಳ ಕುತ್ತಿಗೆಗೆ ಕತ್ತಿ

ಕೇಂದ್ರ ಆಹಾರ ಮಂತ್ರಿ ಮಾನ್ಯ ಮುನಿಷಿಯವರು ಆಹಾರಾಭಾವ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಅಭೂತಪೂರ್ವ ಯೋಜನೆಯೊಂದನ್ನು ಕಲ್ಪಿಸಿರುವಂತೆ ಇಂದು ಹಿಂದೂಸ್ಥಾನದಲ್ಲಿರತಕ್ಕ ಐದು ಕೋಟಿ ಕೋತಿಗಳ ನಾಶವಾಗದೆ ಆಹಾರ ಸ್ವಾವಲಂಬನವು ಸಾಧ್ಯವಾಗಲಾರದು : ಇದಕ್ಕಾಗಿ ಕೋವಿ ಲೈಸನ್ಸು ಪಡೆಯುವ ಪ್ರತಿಯೊಬ್ಬನೂ ಕನಿಷ್ಟಪಕ್ಷ 25 ಕೋತಿಗಳನ್ನು ಕೊಂದಿರುವುದಕ್ಕೆ ರುಜುವಾತು ಪಡಿಸದ ವಿನಃ ಲೈಸನ್ಸು ಸಿಗಲಾರದು, ಎಂಬಂತಹ ನಿಯಮವನ್ನು ಜಾರಿಗೆ ತರಲಿರುವಂತೆ! ಎಂತಹ ಅಭೂತಪೂರ್ವ ಯೋಜನೆ! ಇದರಿಂದಲೂ ಆಹಾರ ಕೊರತೆಯು ನೀಗದಿದ್ದರೆ ಮತ್ತೆಂದಕ್ಕೆ? ಒಂದೋ ಎರಡೋ ಸಂತತಿಗಿಂತ ಹೆಚ್ಚು ಸಂತತಿಯಾಡಲ್ಲಿ ರೇಷ್ಮೆ ಧಾನ್ಯವು ಸಿಗಲಾರದೆಂಬ ನಿಯಮವೂ ಜಾರಿಗೆ ಬರಬಹುದು! ಇದರಿಂದಲೂ ಸಾಧ್ಯವಾಗದಿರುವಲ್ಲಿ ಧನಿಕನೊಬ್ಬನು ಬಡವನೊಬ್ಬನನ್ನು ಸಜೀವ ಕೊಂದರೆ ಮಾತ್ರ ಕೊಲ್ಲಿಸಿದರೆ ಮಾತ್ರ ರೇಷ್ಮೆ ಧಾನ್ಯದ ವಿತರಣೆಯು ಸಿಗಬಹುದೆಂಬ ಯೋಜನೆಯು ಜಯಾಪಜಹುದೇ? ಅಂತೂ ಬಡ ಭಾರತೀಯನು ಹಸಿವಾಗತ್ತೆಂದು ಹೇಳಿ ಬೊಡಸೆ, ಫಯರ್ ಆರ್ಡರ್ ಮಾಡದಿದ್ದರೆ ಒಳ್ಳಿತು. 'ಸಹಯಜ್ಞಾಃ.....ಪರಸ್ಪರಂ ಭಾವಯಂತಃ.....' ಎಂಬ ಗೀತಾಚಾರ್ಯನ ಉಕ್ತ್ಯಂತೆ ದೈವದತ್ತವಾದ ಬೆಳೆಯಿಂದ ದೇವರಾಧನೆಯನ್ನು ಬಿಟ್ಟು ಅದರ ಫಲವಾಗಿ 'ಪುನರ್ದಾರಿದ್ರ್ಯಃ ಪುನರೇವ ಪಾಪೀ' ಎಂಬಂತೆ ಪಾಪವನ್ನು ಭವಿಸುತ್ತಿದ್ದ ಈಗಲಾದರೂ ವಿವೇಕೋದಯವಾಗುವುದರಿಂದ ಒದಲಾಗಿ ಬಡ ಮಂಗಗಳ ನಾಶದಲ್ಲಿ ತೊಡಗುತ್ತಿರುವುದು ವಿಚಿತ್ರ ವರ್ತನೆಯಾಗಿದೆ; ಇಕಿದ್ಯಂತಲೂ ಭೀಕರ ಬರಗಾಲಕ್ಕೆ ಕಾರಣವಾಗದಿರಲು. ಪಾಶ್ಚಾತ್ಯ ನಾಗರೀಕತೆಯು ಪೋಷಕ ನಾಸ್ಕಿಕ ಭಾವನೆಯು ತಳಹದಿ, ನವೀನ ವಿದ್ಯಾಭ್ಯಾಸದಿಂದುಂಟಾದ ನವಯುವಕರ ವಿವೇಕ ನಾಶಕ್ಕೆ ನಿದರ್ಶನವಾಗಿದೆ.

ಧೈರ್ಯಬೋಧ

The Only Argument They Understand

From the daily newspaper THE TAMPA TRIBUNE, Tampa, Florida, U. S. A.

ಅವಂಗೆ ಆರ್ಥವಾಗುವ ಒಂದೇ ಭಾಷೆ

Kann. (Eng. 430)

ಸಂದರ್ಶನ

ಬಹಳ ಜನರಿಗೆ ಪ್ರಖ್ಯಾತ ಪುರುಷರು ಮತ್ತು ಸ್ತ್ರೀಯರ ವಿಷಯದಲ್ಲಿ ಹಂಟೆ ಹೊಡೆಯುವುದರಲ್ಲಿ ಹೆಚ್ಚು ಅಭಿರುಚಿ ಚರ್ಚಿಲ್ಲುಗು ವಿರಾಮ ವೇಳೆಯಲ್ಲಿ ಏನು ಮಾಡುವರೆಂಬುದನ್ನೂ, ಬಿಂಗ್ ಕ್ರಾಸ್ಬಿಗೆ ಯಾವ ಪುಸ್ತಕಗಳ ಮೇಲೆ ಅಭಿರುಚಿ ಎಂಬುದನ್ನೂ, ಪತಿ ರೂಸ್ವೆಲ್ಟರಿಗೆ ಮಿಷ್ಟ ಮುಂದಿ ನೊಮ್ಮಕ್ಕ ಳೆಂಬುದನ್ನು ಅರಿಯುಲು ಇಚ್ಛಿಸುತ್ತಾರೆ.

'ಈ ಎಲ್ಲ ಕಣುಕು ವಿಷಯಗಳು ಸರ್ವಾಂತರ್ಯಾಮಿಯಾದ ಪತ್ರಿಕೋದ್ಯೋಗಿಯಿಂದ ತನ್ನ ಚಪಲಚಿತ್ತದ ಓದುಗರ ಆಹ್ಲಾದಕ್ಕಾಗಿ ಶಯಾರಿಸಲ್ಪಡುತ್ತವೆ ಬಹು ಜನಸಾಮಾನ್ಯ ವೇಳೆಯಲ್ಲಿ, ಆತನು ಮನೆಗೆ, ಉಡುಪು ಧರಿಸುವ ಕೊಠಡಿಗೆ ಅಥವಾ ಕಛೇರಿಗೆ ನುಗ್ಗುತ್ತಾನೆ. ಮತ್ತು ತಾನು ಬಯಸಿದವರು ಕೈಗೆ ಸಿಕ್ಕಿದರೆ, ಬೇಕಾದ್ದೆಲ್ಲಾ ಕೇಳಿ ಕೇಳಿ ಉತ್ತರ ಗೀಚಿಕೊಳ್ಳುತ್ತಾನೆ.

ಮನುಷ್ಯಾಂತರಂಗಳ ಹಿಂದೆಳೆಜೇಕ್ ಜುಲ್ಕ್ ವಿಚಾರ ಸಂದರ್ಶಿಸಲ್ಪಟ್ಟನು. ಪ್ರಪಂಚದ ಸತ್ಯಾಸತ್ಯ ಕಣಕಾಲು ಪ್ರಾಣದ ಮೇಲೆ ಪ್ರಯಾಣಮಾಡುವ ವಿಚಿತ್ರ ಭಾವನೆಯನ್ನು ಊಹಿಸಿದ ಮನುಷ್ಯನು ಆತನು ಎಂಬುದು ನಿನ್ನ ನೆನಪಿನಲ್ಲಿರಬಹುದು 1927 ನೇ ಜುಲೈನಲ್ಲಿ ಹೊಂಟನು ಮತ್ತು 1938 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಸಂದರ್ಶಿಸಲ್ಪಟ್ಟನು ಪ್ರತಿಕೋದ್ಯೋಗಿಯಿಂದ 'ನಿನ್ನ ಆರೋಗ್ಯವೆಂತಿದೆ' ಎಂದು ಕೇಳಲ್ಪಟ್ಟನು. 'ಬಹು ಅಚ್ಚುಕಟ್ಟಾಗಿದೆ; ನೆಗಡಿ ಆಗಾಗ ಉಂಟಾಗುತ್ತದೆ; ಈಜಿಪ್ಟಿನಲ್ಲಿದ್ದಾಗ ಮಲೇರಿಯಾದಿಂದ ಪೀಡಿಸಲ್ಪಟ್ಟೆನು. ಆದರೆ ಮಾಜಿ ಲೀಗ್ ಆಫ್ ನೇಷನ್ಸಿನ ಮಲೇರಿಯಾ ಸಮಿತಿಯು ಸೂಚನೆ ಅನುಸರಿಸಿದ್ದರಿಂದ ವಿನೂ ತೊಂದರೆಯಾಗಲಿಲ್ಲ 5-7 ದಿನಗಳವರೆಗೆ 15-20 ಗ್ರೇಕ್ವಿನೈನನ್ನು ಸೇವಿಸಿದೆ-ಮತ್ತು ಪ್ರತಿಬಂಧಕವಾಗಿ ಮಲೇರಿಯಾ ಕಾಲದಲ್ಲಿ, ದಿನವೂ 6 ಗ್ರೇಕ್ವಿನೈನನ್ನು ಸೇವಿಸುತ್ತೇನೆ ಅದು ಆಶ್ಚರ್ಯಕರವಾದ ರೀತಿ ಸಹಾಯಕರವಾಗಿದೆ, ಮತ್ತು ಈ ಔಷಧವನ್ನು ಕ್ಷೇಮವಾಗಿ ಪ್ರತಿಯೊಬ್ಬರಿಗೂ ಶಿಫಾರಸು ಮಾಡಬಲ್ಲೆ' ಎಂದ ವೃಚ್ ಉತ್ತರವಿತ್ತನು 1918 ರಲ್ಲಿ ಮಾಜಿ ಲೀಗ್ ಆಫ್ ನೇಷನ್ಸಿನ ಮಲೇರಿಯಾ ನಿಪುಣ ಸಮಿತಿಯವರು ದೀರ್ಘವಾದ ಪರಿಶೀಲನೆಯಿಂದ ಮೇಲ್ಕಂಡ ನಿರ್ಧಾರಕ್ಕೆ ಒಂದಿಬ್ಬುದು; ಅನೇಕ ವರ್ಷಗಳು ಕಳೆದುಹೋಗಿದ್ದರೂ, ಈ ಔಷಧೋಪಚಾರವು ಇಂದೂ ಶಿಫಾರಸು ಮಾಡಲ್ಪಡುತ್ತಿದೆ.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಕಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯು ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್

For Quality Printing
L. N. Press
Sivarampet, Mysore

ಶಕಿಸುದ್ದ
— ಉತ್ತಮವಾದ ಪ್ರಾಸ್ —

ಹಿಟ್ಲರಿನ ಪ್ರೇತ ಕಂಡ ಮೇರಿಯಾ

ಮೇರಿಯಾ ಎಸ್ಥರ್ ಬಿರ್ಗೋ ಎಂಬ ಪತ್ರಿಕೋದ್ಯೋಗಿ ಮಹಿಳೆಗೆ ಪೆಟಗೋನಿಯಾ ಮರುಭೂಮಿ ಸಂಚಾರ ಕೈಗೊಂಡಕಾಗ ದಾರಿತಪ್ಪಿತು : ಹೆದರಿ ಕಂಗಾಲಾಗಿ ಒಂದು ದಟ್ಟವಾದ ಪೊದೆಗಳ ಎಡೆಯಿಂದ ಅಕೆ ವೇಗವಾಗಿ ಮುಂದೆ ಸರಿಯುವಾಗ, ಗಡ್ಡವಿಲ್ಲದ ಚೆನ್ನಾಗಿ ಬೋಳಿಸಿದ ಒಂದು ವ್ಯಕ್ತಿ ಅವಳಿಗೆ ಕಾಣಿಸಿತು : ಅವನ ಕಣ್ಣುಗಳು ಚಕ್ಕಿಯಂತೆ ವಿನಾಗುತ್ತಿದ್ದವು ; ತಲೆಕೂದಲು ಮತ್ತು ಹುಬ್ಬು ಚೆನ್ನಾಗಿ ಬಾಚಲ್ಪಟ್ಟಿದ್ದವು ; ಮುಖದ ಬೇಲೆ ಮೂರು ಕಲೆಗಳೂ ಇದ್ದವು : ಮನೆಯಲ್ಲೇ ನೇಯ್ದ ಒಟ್ಟೆಗಳನ್ನು ಅತ ಉಟ್ಟುಕೊಂಡಿದ್ದ ; ಕಾಲಿಗೆ ದೊರಗು ಬೂಟ್ಸುಗಳು ; ಮೈಗೆ ಒಂದು ಚರ್ಮದ ಓವರ್‌ಕೋಟು ; ಬಲು ಚಿಕ್ಕ ಕಿವಿಗಳು (ಹಿಟ್ಲರನಿಗೆ ಬಲು ಚಿಕ್ಕ ಕಿವಿಗಳಿದ್ದುವೆಂಬುದನ್ನು ಮೇರಿಯೂ ತಿಳಿದಿದ್ದಳು)

ನಡುಗುವ ಕೈಯ ಒಂದು ಬೆರಳನ್ನು ಆ ವ್ಯಕ್ತಿಯು ಅವಳೆಗೆ ತೋರಿಸುತ್ತಾ, ' ನೀನು ಹಿಟ್ಲರನಲ್ಲವೇ ' ಎಂದು ತಬ್ಬಿಬ್ಬಾಗಿ ಮೇರಿಯು ಕೇಳಿದಳು

ಆ ಛಾಯೆ (ಹೌದು, ಅದು ಒಂದು ಬರೇ ಛಾಯೆಯಾಗಿತ್ತು) ಮಾತನಾಡಿತು—' ನೀನು ಸಂಖ್ಯಿಯುವಂಥಾ ವ್ಯಕ್ತಿ ನಾನೆಲ್ಲ ; ನನ್ನ ಜರ್ಮನ್ ಮೂಲ ವಿಚಾರಿಸಲು ಸುಲಭವಿದೆ ; ಈ ಪರ್ವತ ಪ್ರದೇಶದಲ್ಲಿ ನನ್ನಂತಹ ಹಲವು ಮಂದಿಯನ್ನು ನೀನು ಕಾಣಬಹುದು ' ಛಾಯೆಯು ಮಾತು !

ಹೌದು, ಹೌದು ! ನೀನು ನಿಸ್ಸಂದೇಹವಾಗಿಯೂ ಹಿಟ್ಲರನೇ ಇರುವೆ : ಮಾತಾಡು ; ಮೊಗಗೊಟ್ಟು ಮಾತಾಡು ' ಭಯಭ್ರಾಂತಳಾದ ಮೇರಿಯಾ ಚೀರಿದಳು !

ಅದು ಮಾತಾಡಿತು— ' ನಾನು ನನ್ನ ದೇಶಬಿಟ್ಟು ಓಡಿದೆ ; ನನ್ನ ಜೀವನವೆಲ್ಲಾ ಬೂದಿಯಾಯಿತು ; ನಾನು ಪ್ರೇಯಸಿ ಜೊತೆಯಲ್ಲಿ ಪ್ರಾರಂಭಗಲು ನನಗೆ ಅವಕಾಶ ದೊರೆಯಲಿಲ್ಲ ; ಕೊನೆಯ ದುರಂತ ಭೇಟಿಗು ಭಾಗ್ಯವೊಂದು ನನಗೆ ದೊರೆಯಿತು ; ನನಗೆ ತಿಳಿಯದೆ ಅಕೆ ವಿಷಪಾನ ಮಾಡಿದಳು ..... ನನ್ನ ತೋಳ್ಬೆರೆಯಲ್ಲೇ ಕೊನೆಯುಸಿರೆಳೆದಳು '

ಇಲ್ಲಿಗೆ ಪ್ರೇತ ಕಾಣದಾಯಿತು ; ಮೇರಿಯ ಕಥೆಯೂ ಮುಗಿಯಿತು !

(ಪ್ರ – ಮಂ)



" ಗೋರಕ್ಷಣ "

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ ' ಗೋರಕ್ಷಣ ' ದಲ್ಲಿ ಗೋರಕ್ಷಣೆ, ಪಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು.

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪ್ರತಿ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : ' ಗೋರಕ್ಷಣ ' ಸತ್ಯವಾದಿ ಆಫೀಸ್, ಚಾಮರಾಜನಗರ

Edited, Printed and Published by M. S. Krishna Rao, at the Satyavadi Press Chamrajpuram Mysore

ಮಾತಿನ ವರಸೆ

ಮಾತಿಗೆ ಹೇಳಿತ್ತೇನೆ. ಕೇಳಿ. ಚೈನಾ ಪ್ರಜೆಗಳನ್ನೆಲ್ಲರನ್ನೂ ಸಾಲಿಗೆ 4 ಮಂದಿಯಂತೆ ಸಾಲು ಸಾಲಾಗಿ ನಿಲ್ಲಿಸಿ, ಮೊದಲು ನಿಂದಿರುವ 4 ಮಂದಿಯನ್ನು ಆ ತರುವಾಯ ಅವರ ಹಿಂದಿರುವ 4 ಮಂದಿಯನ್ನು ಈ ರೀತಿ ವರಸೆಯಾಗಿ ಸುಟ್ಟುಹಾಕಿದವೆನ್ನೋಣ ಈ ಬಗೆಯಲ್ಲಿ ನಿಮಿಷಕ್ಕೆ ೪ ನೂರು ಇಪ್ಪತ್ತು ಮಂದಿಯನ್ನು ಕೊಲ್ಲಬಹುದು. ಅಂದರೆ ಗಂಟೆಗೆ ಸಾವಿರದಿನ್ನೂರು ಮಂದಿ. ದಿನಕ್ಕೆ 28800 ಮಂದಿ, ವರ್ಷಕ್ಕೆ 10512000 ಮಂದಿ ಹತ್ತು ವರ್ಷಗಳಿಗೆ 105120000 ಮಂದಿ ಆಗುತ್ತಾರೆ. ಈ ಬಗೆಯಲ್ಲಿ ಚೀನಾದಲ್ಲಿಯ 45 ಕೋಟಿ ಮಂದಿಯನ್ನು ನಾಶಮಾಡಲು 43 ವರ್ಷಗಳಾಗುತ್ತದೆ ಇಷ್ಟರೊಳಗೆ ಇನ್ನೊಂದು ತಲೆಯವರು ಜನ್ಮಿಸುತ್ತಾರೆ. ಚೈನಾದವರನ್ನು ನಾಶಮಾಡುವುದು ಎಂದಿಗೂ ಪೂರ್ತಿಯಾಗದು. (ಸ್ವಿಟ್ಜರ್‌ಲಿಂಡ್ ಎಂಬ ಸ್ವಿಸ್ ಪತ್ರಿಕೆಯ ಸಂಪಾದಕೀಯ)

ಹುಚ್ಚರ ಹುಚ್ಚಾಟ

ಗುಂಟೂರಿನಲ್ಲಿ ಒಬ್ಬ ಕಾಂಗ್ರೆಸ್‌ವಾದಿಯು ಪ್ರಾಯೋಪವೇಶ ಮಾಡುತ್ತಿದ್ದಾನೆ, ಕಾರಣವೇನೆನ್ನುವಿರಾ ? 42 ರ ಕಾಂಗ್ರೆಸ್ ಚಳುವಳಿಯಲ್ಲಿ ವ್ಯಯ ಮಾಡಿದ ಧನವನ್ನು ಅದರ ಸ್ವಂತದವರಿಗೆ ಕಲುಪಿಸಬೇಕೆಂಬುದು ಅವರ ವಾದ ಇತರ ಕಾಂಗ್ರೆಸಿಸವರು ಇದನ್ನು ಒಪ್ಪಲಿಲ್ಲವೆಂದು ಕಾಣುತ್ತದೆ ಅವರನ್ನೂ ಒಪ್ಪುವಂತೆ ಮಾಡಲು ಈ ಪ್ರಾಯೋಪವೇಶ. ಅವರು ಖರ್ಚು ಮಾಡಿರುವ ಹಣ 1600 ರೂಗಳಂತೆ ಅಲ್ಲಿಯ ಜನರಲ್ಲಿ ಮುಖ್ಯಸ್ಥರು ಚಂದಾರಾಗಳನ್ನೆತ್ತಿ ಈ ಹಣವನ್ನು ಅವರಿಗೆ ಕೊಡಿಸುವ ಏರ್ಪಾಡು ಮಾಡಬೇಕಿತ್ತಂತೆ. ಈ ಬಗೆಯಲ್ಲಿ ನೊಂದುಕೊಳ್ಳುವುದಕ್ಕಿಂದ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಲು ಯತ್ನಿಸುವುದೂ ಒಂದು ಹುಚ್ಚು. ಘೋರವಾದ ಒಂಟಿ ಸ್ವಭಾವದವನು ಕಲಸವೂ ಈ ಬಗೆಯದು. ಇದು ನಿಜವಾಗಿಯೂ ಕಾಂಗ್ರೆಸುವಾದಿಯ ಲಕ್ಷಣವಾಗಿರಕೂಡದು.



from the daily newspaper, THE SAN FRANCISCO CHRONICLE, San Francisco, California, U.S.A.

ಕೊರಿಯಾದಲ್ಲಿ ವಿಶ್ವಸಂಸ್ಥೆ ಪುನರ್ನಿರ್ಮಾಣ ಸೇನೆ